ISSN: 2581-8511
Tumbe Group of International Journals
A Multidisciplinary Journal
Volume- 1
Issue-2
May-Aug: 2018

# ಸಾಂಸ್ಕೃತಿಕ ನಾಯಕ ಜುಂಜಪ್ಪ

**ನಾಗರಾಜಕುಮಾರ.**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಚಿಕ್ಕನಾಯಕನಹಳ್ಳಿ. ತುಮಕೂರು ಜಿಲ್ಲೆ.
E-mail: snagkumar29@gmail.com

## ಪೀಠಿಕೆ

ಕರ್ನಾಟಕದ ದಕ್ಷಿಣ ಭಾಗದ ಜಿಲ್ಲೆಗಳಾದ ಚಿತ್ರದುರ್ಗ, ತುಮಕೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಬಹು ಪ್ರಾಚೀನ ಕಾಲದಿಂದಲೂ ನೆಲೆಸಿರುವ ಒಂದು ಬುಡಕಟ್ಟು ಜನಾಂಗವೆಂದರೆ ಕಾಡು ಗೊಲ್ಲರು. ಈ ಬುಡಕಟ್ಟಿನ ಅದಿದೇವತೆ ಮತ್ತು ನಾಯಕ ಈ ಜುಂಜಪ್ಪ. ಈತನನ್ನು ಕುರಿತು ಈ ಭಾಗದ ಕಾಡು ಗೊಲ್ಲರು ತಮ್ಮ ವಿಶಿಷ್ಟ ವಾದ್ಯವಾದ ಗಣೆಯಲ್ಲಿ ಒಂದು ಸಂದರ ಕಥೆ ಅಥವಾ ಹಾಡಿನಲ್ಲಿ ದೀರ್ಘವಾಗಿ ಹೇಳುವ ಕಥಾನಕವೇ ಸಾಂಸ್ಕøತಿಕ ನಾಯಕನಾದ ಈ ಜುಂಜಪ್ಪನ ಕಥೆ. ಇದನ್ನು ಜುಂಜಪ್ಪನ ಪದ, ಜುಂಜಪ್ಪನ ಕಥೆ, ಜುಂಜಪ್ಪನ ಹಾಡು ಎಂದು ಬಿಂಬಿಸುತ್ತಾರೆ. ಆದರೆ ಜಾನಪದ ಅಧ್ಯಯನದ ದೃಷ್ಠಿಯಿಂದ ಇದನ್ನು ಜುಂಜಪ್ಪನ ಮಹಾಕಾವ್ಯ ಎಂದು ಕರೆಯಲಾಗಿದೆ. ಇದನ್ನು ಶ್ರೀ ಚಲುವರಾಜುರವರು ಸಂಗ್ರಹಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯ ಈ ಮಹಾಕಾವ್ಯವನ್ನು ಜುಂಜಪ್ಪ ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಮಹಾಕಾವ್ಯಯವನ್ನು ಮೊದಲಬಾರಿಗೆ ಪರಿಚಯಿಸಿದವರು ಜೀ.ಶಂ ಪರಮಶಿವಯ್ಯನವರು. ನಂತರ ಅನೇಕ ಜಾನಪದ ವಿದ್ವಾಂಸರಾದ ತೀ.ನಂ ಶಂಕರನಾರಾಯಣ, ಎಂ.ಎನ್ ವೆಂಕಟೇಶ, ಪೂಜಾರಿ ಶಿವಣ್ಣ ಈ ಕುರಿತು ಸಂಶೋಧನೆ ಮಾಡಿದ್ದಾರೆ. ಜುಂಜಪ್ಪನ ಈ ಕಾವ್ಯ ಸುಮಾರು ಹನ್ನೆರಡು ಮತ್ತು ಹದಿಮೂರನೆಯ ಶತಮಾನದಲ್ಲಿ ನಡೆದಿರಬಹುದು ಎಂದು ಊಹಿಸಲಾಗಿದೆ. ಈ ಮಹಾಕಾವ್ಯ ಪ್ರಮುಖವಾಗಿ ನಾಲ್ಕು ಜನಾಂಗಗಳಿಗೆ ಸಂಬಂಧಿಸಿದವಾಗಿದೆ. ಅವುಗಳೆಂದರೆ ಕಾಡುಗೊಲ್ಲರಲ್ಲಿನ ಮಾರನವರ ಗೊಲ್ಲರು, ಕಂಬಿಗೊಲ್ಲರ ಬೆಡಗುಗಳು, ಮ್ಯಾಸಬೇಡರು ಹಾಗೂ ಅಳುವಿನವರ ಒಕ್ಕಲಿಕಗರಿಗದಾಗಿದೆ. ತುಂಬೆ ಹೂವಿನ ನಾಡಾದ ತುಮಕೂರು ಜಿಲ್ಲೆಯ ಸಿರಾ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಈ ಸಾಂಸ್ಕøತಿಕ ನಾಯಕ ಜುಂಜಪ್ಪನ ದೇವಸ್ಥಾನಗಳು, ಜಾತ್ರೆಗಳು ನಡೆಯುತ್ತವೆ. ಈ ಮಹಾಕಾವ್ಯ ದನಗಳನ್ನು ಕಾಯುತ್ತಿದ್ದ ಕಾಡುಗೊಲ್ಲರು ಮತ್ತು ಬೇಟೆಗಾರರ ವೃತ್ತಿಯ ಪಾಳೆಗಾರರಾದ ಮ್ಯಾಸಬೇಡರ ನಡುವಣ ಹಾಗೂ ಕಾಡುಗೊಲ್ಲರಲ್ಲಿನ ಮಾರನವರು ಮತ್ತು ಕಂಚಿಗೊಲ್ಲರ ನಡುವಣ ಸಂಘರ್ಷ ಕಥನವಾಗಿದೆ. ಈ ಜುಂಜಪ್ಪನ ಹಾಡುಗಳನ್ನು ಹಾಡುವ ಕಲಾವಿದರನ್ನು ಗಣೆಯವರು ಎಂದು ಕರೆಯುತ್ತಾರೆ.

## ಕಥಾ ಸಾರಾಂಶ:

ಜುಂಜಪ್ಪನ ಈ ಮಹಾಕಾವ್ಯ ಅನೇಕ ತಲೆಮಾರಿನಿಂದ ಪಶುಪಾಲಕರಾಗಿ ಜೀವನ ಸಾಗಿಸುತ್ತಿರುವರರ ಏಳು ಬೀಳುಗಳನ್ನು ಕುರಿತ ದುರಂತ ಕಾವ್ಯವಾಗಿದೆ. ಈ ಕಥೆಯ ಮೊದಲ ಭಾಗದಲ್ಲಿ ಮೊದಲನೆಯ ತಲೆಮಾರಿನ ದೇವರ ದಯಾಮಾರ ಮತ್ತು ಆತನ ಪತ್ನಿ ಕಂಬಕ್ಕ ಮತ್ತು ಇವರ ಮದುವೆ, ನಂತರ ಇವರಿಬ್ಬರೂ ಭಯಂಕರ ಕಾಡಿನಲ್ಲಿ ಹಸು-ದನಗಳನ್ನು ಪೋಷಿಸುವುದು ಇವರ ಕುಲವೃತ್ತಿಯಾಗಿತ್ತು. ಇದೇ ಸಂಧರ್ಭದಲ್ಲಿ ಪತ್ನಿ ಕಂಬಕ್ಕ ಒಂದು ಗಂಡು ಮಗುವಿಗೆ ಜನ್ಮ ನೀಡುವುದು, ಹಾಗೂ ಇಬ್ಬರು ಆ ದಟ್ಟವಾದ ಅರಣ್ಯದಲ್ಲಿ ದಾರಿ

ತಪ್ಪಿ ತೃಷೆ, ಬಾಯಾರಿಕೆಯಿಂದ ಇಬ್ಬರೂ ಮರಣವನ್ನಪ್ಪುವುದು ಮೊದಲನೇ ಭಾಗದದಲ್ಲಿ ತುಂಬಾ ಸುಂದರವಾಗಿ ವಿವರಿಸಲಾಗಿದೆ.

ನಂತರ ಎರಡನೇ ಭಾಗದಲ್ಲಿ ಇಬ್ಬರೂ ಸತ್ತ ನಂತರ ಅನಾಥವಾಗಿದ್ದ ಮಗುವನ್ನು ಅವರ ಸೋದರತ್ತೆ ಬಡಚಿತ್ರಮ್ಮ ಎಂಬುವವಳು ಸಾಕಿ ಸಲುಹುತ್ತಾಳೆ. ಈ ಮಗುವಿಗೆ ಕಂಗೂರ ಮಲ್ಲೇಗೌಡ ಎಂಬ ಹೆಸರನ್ನಿಡುತ್ತಾರೆ. ಆದರೆ ತನ್ನ ಸಂಬಂಧಿಗಳಾದ ದೊಡ್ಡಪ್ಪ-ದೊಡ್ಡಮ್ಮರಿಂದ ಇವನು ಕಿರುಕುಳಕ್ಕೆ ಒಳಗಾಗುತ್ತಾನೆ,. ಈ ಕಿರುಕುಳವನ್ನು ತಡೆಯಲಾರದೆ ಅಳೂಪನವರ ಒಕ್ಕಲಿಗನಾದ ಹೊನ್ನಟ್ಟಿ ಆಲೇಗೌಡರ ಬಳಿ ಆಶ್ರಯವನ್ನ ಪಡೆಯುತ್ತಾನೆ. ನಂತರ ಇದೇ ಆಲೇಗೌಡ ಇವನನ್ನು ಸಾಕಿ ಸಲುಹುತ್ತಾನೆ. ಮಲ್ಲೇಗೌಡ ಮದುವೆ ವಯಸ್ಸಿಗೆ ಬಂದಾಗ ಕಂಚಿಯ ಗೊಲ್ಲರ ಚಿನ್ನಮ್ಮನೊಡನೆ ಮದುವೆ ಮಾಡುತ್ತಾರೆ. ಹೀಗೆ ಇಬ್ಬರೂ ಜೀವನ ನಡೆಸುತ್ತಿರಲು ಮಲ್ಲೇಗೌಡ ಚಿನ್ನಮ್ಮನನ್ನು ಬಿಟ್ಟು ದನಗಳನ್ನು ಮೇಯಿಸಲು ಕಾಡಿಗೆ ಹೋದದ್ದರಿಂದ ಅನೇಕ ಕಷ್ಟಗಳನ್ನು ಅನುಭವಿಸುತ್ತಾಳೆ. ಎಷ್ಟೋ ದಿನಗಳ ನಂತರ ಗಂಡನನ್ನು ಕೂಡುತ್ತಾಳೆ. ಚಿನ್ನಮ್ಮ ತನ್ನ ಮನೆ ದೇವರಾದ ಗೌರಸಂದ್ರದ ಮಾರಕ್ಕನ ಪ್ರಯತ್ನದಿಂದ ಹಾಗೂ ಶಿವನ ವರಪ್ರಸಾದದಿಂದ ನಮ್ಮ ಈ ಕಥೆಯ ನಾಯಕನಾದ ಜುಂಜಪ್ಪ ಎಂಬ ಮಹಾನ್ ಚೇತನವನ್ನು ಮಗನನ್ನಾಗಿ ಪಡೆಯುತ್ತಾಳೆ. ಇದಲ್ಲದೇ ನಂತರ ಮಾರಣ್ಣ, ಮೈಲಣ್ಣ ಎಂಬ ಎರಡು ಗಂಡು ಮಕ್ಕಳಿಗೆ ಮತ್ತು ಮಾರಕ್ಕ ಎಂಬ ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ನಂತರ ತನ್ನ ಗಂಡ ಮಲ್ಲೇಗೌಡನ ನಿಧನದ ನಂತರ ಚಿನ್ನಮ್ಮ ವಿಧವೆಯಾಗಿ ಅನೇಕ ಕಷ್ಟ ಕಾರ್ಪಣ್ಯಗಳನ್ನು ತನ್ನ ಜೀವನದಲ್ಲಿ ಅನುಭವಿಸುತ್ತಾಳೆ.

ಮೂರನೇ ಭಾಗ ಕದನದ ವಿವರಗಳನ್ನು ಕಟ್ಟಿಕೊಡುತ್ತದೆ. ಜುಂಜಪ್ಪ ತನ್ನ ಸೋದರ ಮಾವಂದಿರೊಡನೆ ಹಾಗೂ ಮ್ಯಾಸದೇವರ ಕುಲಕ್ಕೆ ಸೇರಿದ ಸಿರ ರಂಗಣ್ಣ, ಹುಲಿಕುಂಟೆ ತಮ್ಮಣ್ಣ ಮೊದಲಾದ ಪಾಳೇಗಾರರೊಡನೆ ಮತ್ತು ತಾಳೆದುರ್ಗಿ ಎಂಬ ಸ್ತ್ರೀ ದೇವತೆಯೊಡನೆ. ನಡೆಸಿದ ಸಂಘರ್ಷದ ವಿವರಗಳಿವೆ. ಆದರೆ ಈ ಜುಂಜಪ್ಪನ ಏಳ್ಗೆಯನ್ನು ಸಹಿಸದ ಇವನ ಸೋದರ ಮಾವಂದಿರು ತಂಗಿ ಮಾರಕ್ಕನಿಂದ ಊಟದಲ್ಲಿ ವಿಷ ಹಾಕಿ ಸಾಯಿಸುತ್ತಾರೆ. ಇದರಿಂದ ಕೋಪಗೊಂಡ ಜುಂಜಪ್ಪ ಅವರನ್ನು ಹಾಗೂ ಕಂಚಿಯರ ಹಟ್ಟಿಯನ್ನು ಸುಟ್ಟು ಬೂದಿ ಮಾಡುತ್ತಾನೆ. ಹೀಗೆ ಈ ಕಥೆ ಮುಂದುವರೆಯುತ್ತಾ ಜುಂಜಪ್ಪನ ಪವಾಡಗಳನ್ನು ವರ್ಣಿಸುತ್ತದೆ. ನಂತರ ಇವನ ತಂಗಿ ಮಾರಕ್ಕನ ಗರ್ಭದಲ್ಲಿದ್ದ ಮಗುವಿನಿಂದ ಕಂಚಿಯ ಗೊಲ್ಲರ ಸಂತಾನ ಮುಂದುವರೆಯುತ್ತದೆ.

**ಸಾಹಿತ್ಯಿಕ ಮೌಲ್ಯ:**

ಈ ಕಾವ್ಯದಲ್ಲಿ ಪಶುಪಾಲನೆಗೆ ಸಂಬಂಧಿಸಿದಂತೆ ಅಪೂರ್ವ ಚಿತ್ರಣವಿರುವುದನ್ನು ಕಾಣಬಹುದು. ಮತ್ತು ಈ ಮಹಾಕಾವ್ಯ ಸೊಗಸಾದ ವರ್ಣನೆಗಳಿಂದ ಕೂಡಿದ್ದು, ಕಥನ ಕಲೆ ನಾಟಕೀಯವಾಗಿ ಆಕರ್ಷಕವಾಗಿದೆ. ಇಲ್ಲಿ ಬರುವ ಪ್ರತಿಯೊಂದು ಪಾತ್ರಗಳನ್ನು ಹಾಡುಗಾರರು ಚೆನ್ನಾಗಿ ಚಿತ್ರಿಸಿದ್ದಾರೆ. ಈ ಕಾವ್ಯದಲ್ಲಿ ಕಾಣ ಬರುವ ಪ್ರಧಾನ ರಸಗಳು ವೀರ ಮತ್ತು ಕರುಣಾ ರಸ. ಕೊನೆಯದಾಗಿ ಜುಂಜಪ್ಪ ಸಾಕಿದ ಬಡಮ್ಮೈಲ ಎಂಬ ಹೋರಿ ಚೇಳೂರು ರಂಗಣ್ಣನ ಕಾವಲಿನಲ್ಲಿ ಹೋರಾಡಿ ಗೆಲ್ಲುವ ಪ್ರಸಂಗ ಇಡೀ ಕನ್ನಡ ನಾಡಿನ ಸಾಹಿತ್ಯದ ಇತಿಹಾಸದಲ್ಲೇ ವಿಶಿಷ್ಟವಾಗಿದೆ.

**ಆಕಾರಸೂಚಿ:**


1. ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು – ಜಿ.ಶಂ ಪರಮಶಿವಯ್ಯ.
2. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು. – ತೀ.ನಂ ಶಂಕರನಾರಾಯಣ
3. ಕಾಡುಗೊಲ್ಲ ಬುಡಕಟ್ಟು ವೀರರು- ಮೀರಾಸಾಬಿಹಳ್ಳಿ ಶಿವಣ್ಣ.